'ಅದೆಲ್ಲಾ ಇರಲಿ... ನೀನು ವಲೀಮಾಗೆ(ಬೀಗರೂಟಕ್ಕೆ) ಯಾಕೆ ಬರಲಿಲ್ಲ ಮೊದಲು ಹೇಳು... ನಿನಗೋಸ್ಕರ ಇಡೀ ಬಸ್ಸನ್ನು ಅರ್ಧಗಂಟೆ ತಡವಾಗಿ ಹೊರಡಿಸಿದ್ದಾಯಿತು...'

'ಅದೆಲ್ಲಾ ಮತ್ತೆ ಮಾತಾಡ್ತೀನಿ... ನೀವಿರೋ ಜಾಗದಲ್ಲಿ ಎಲ್ಲಾದರೂ ಟೀವಿ ಇದೆಯಾ?'

'ಹಾಂ... ಹಾಂ... ಈ ಶಾದಿ ಮಹಲಿನ ಆಫೀಸಿನಲ್ಲಿ ಇದೆ ಅಂತ ಕಾಣಿಸುತ್ತೆ.'

'ಆಪಾ... ನೀವು ಕೂಡಲೇ ಟೀವಿ ನೋಡಿದರೆ ಒಳ್ಳೆಯದು.'

'ಈಗ ನಾನೆಲ್ಲಿ ಹುಡುಕಿಕೊಂಡು ಹೋಗಲಿ? ಅದೇನೂಂತ ಹೇಳ ಬಾರದೆ?'

'ಆಪಾ... ನಾವು ಅಜ್ರಾಗೆ ಮೊದಲು ಗಂಡು ಗೊತ್ತು ಮಾಡಿದ್ದೆವಲ್ಲಾ... ಅದೇ ಸಗೀರ್ ಅಹಮದ್ ಮಗ... ನೆನಪಾಯ್ತೇ ನಿಮಗೆ ಪಿಸುಗುಟ್ಟಿದಳು ಅವಳು.

'ನೆನಪಾಗದೇ ಏನು... ಹೇಳು... ಏನಾಯಿತು ಅವನಿಗೆ?'

'ಅವನು ಟೆರರಿಸ್ಟ್ ಅಂತೆ... ಜರ್ಮನಿಯ ಪೊಲೀಸಿನವರು ಅವನನ್ನು ಹಿಡಿದಿದ್ದಾರೆ... ಇಡೀ ಪ್ರಪಂಚ ಅವನ ಹೆಸರನ್ನು ಬೊಬ್ಬೆ ಹೊಡೀತಿದೆ.'

'ಯಾಕೇ... ಯಾಕೇ' ಅವಳು ಆಪಾದಮಸ್ತಕ ತೋಯ್ದು ಹೋಗಿದ್ದಳು.

**'ನಮ್ಮ ಅನೀಸ್‌ಗೆ ಮನೆಯ ಅಲಂಕರಣದ ಬಗ್ಗೆ ಬಹಳ ಅಭಿಮಾನ. ಚಿಕ್ಕವನಾಗಿದ್ದಾಗಿನಿಂದಲೂ ಅವನ ಅಭಿರುಚಿಯೇ ಹಾಗೆ. ಅವನ ಪಾಕೆಟ್‌ಮನಿಯಲ್ಲಿಯೂ ಅವನು ಚಾಕೊಲೇಟ್ ತಿನ್ನದೆ ಮನೆಗೊಂದು ಮನಿಪ್ಲಾಂಟನ್ನಾದರೂ ತರುತ್ತಿದ್ದ' ಎಂದು ವಿವರಣೆ ನೀಡಿ 'ಅವನಿಗೆ ಮೊದಲನೇ ಪೋಸ್ಟಿಂಗ್ ಆಗಿದ್ದು ಕೈರೋಗೆ. ಅಲ್ಲಿನ ಪ್ರಾಚೀನ ನಾಗರಿಕತೆಯಿಂದ ಅವನು ಬಹಳ ಪ್ರಭಾವಿತನಾಗಿದ್ದ' ಸಗೀರ್ ಸೌಮ್ಯವಾಗಿ ಮಗನ ಬಗ್ಗೆ ಗುಣಗಾನ ಮಾಡಿದ.**

'ಅವನು... ಅನೀಸ್ ಅಂತ ಅವನ ಹೆಸರಲ್ಲವೇ... ಜರ್ಮನಿಯ ಪ್ಲೇನನ್ನು ನೂರಾ ಹತ್ತು ಪ್ರಯಾಣಿಕರೊಂದಿಗೆ ಹೈಜಾಕ್ ಮಾಡಿದನಂತೆ.'

'ಛೇ... ಸುಳ್ಳು.'

'ನಾನು ಕೂಡಾ ಹಾಗಂತಲೇ ತಿಳಿದಿದ್ದೆ. ಆದರೆ, ನೀವು ಒಂದು ಸಾರಿ ಟೀವಿ ನೋಡಿ. ನಿಮಗೆ ಎಲ್ಲಾ ಗೊತ್ತಾಗುತ್ತೆ.'

ಗಿರ್ರೆಂದು ತಲೆ ಸುತ್ತಿ ಬಂದು ಬೀಳುವಂತೆ ಅದರೂ ಅವಳು ಸಾವರಿಸಿಕೊಂಡು ಕಿಟಕಿಯ ಕಂಬಿಯನ್ನು ಹಿಡಿದಳು .ರೆಹಮತ್‌ಳಿಂದ ಯಾವ ಪ್ರತಿಕ್ರಿಯೆಯೂ ಬಾರದೆ ಇದ್ದುದರಿಂದ ಸಾದಿಕಾ ಒಂದೆರಡು ಗಳಿಗೆ ಲೈನಿನಲ್ಲಿದ್ದು, ನಂತರ ತನ್ನ ಮೊಬೈಲನ್ನು ಆಫ್ ಮಾಡಿದಳು. ತನ್ನ ಸಹಾಯಕ್ಕೆ ಯಾರಾದರೂ ಬರಬಹುದೇ ಎಂದು ಅವಳು ನಿಂತ ಹಾಗೆಯೇ ದೃಷ್ಟಿಯನ್ನು ಹಾಯಿಸಿದಳು. ಕಣ್ಣು ಮಂಜಾದಂತೆನಿಸಿ ಬಾಯೊಣಗಿ ಬಂದು ಮುಖವೆಲ್ಲಾ ಬಿಳಿಚಿ ಹೋಗಿ